**<u>ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *23.02.2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲು *1* ನೇ ಆರೋಪಿತರ ಪರ ವಕೀಲರಾದ ಶ್ರೀ ಸಿ.ಎಮ್.ಜೆ ರವರಿಂದಃ</u>**

1 ನೇ ಆರೋಪಿ ಶರತ್ ಕುಮಾರ್ ಮತ್ತು ನನ್ನ ತಂದೆ ಯಾವಾಗಲು ಒಟ್ಟಿಗೆ ಇರುತ್ತಿದ್ದರು ಎಂದರೆ ನಿಜ. ಶರತ್ ಕುಮಾರ್ ಮತ್ತು ನನ್ನ ತಂದೆಯ ನಡುವೆ ಒಳಯ ಸಂಬಂಧ ಮತ್ತು ವಿಶ್ವಾಸ ಇತ್ತು ಎಂದರೆ ನಿಜ. ದಿ.28.05.2021 ರ ವರೆಗೆ ಶರತ್ ಕುಮಾರ್ ಮತ್ತು ನನ್ನ ತಂದೆಯ ನಡುವೆ ಯಾವುದೇ ಜಗಳ ಮತ್ತು ವಿವಾದಗಳು ಇರಲಿಲ್ಲ ಎಂದರೆ ನಿಜ. ನನ್ನ ತಂದೆಗೂ ಮತ್ತು 1 ನೇ ಆರೋಪಿತನಿಗೂ ವ್ಯವಸಾಯ ಜಮೀನು ಇದೆ ಎಂದರೆ ನಿಜ. ಪೂಶವಕ್ಕೆ ಇರುವ ನಮ್ಮ ತಂದೆಯ ಜಮೀನು ಮತ್ತು ಆರೋಪಿತನ ಜಮೀನು ಒಂದೆ ಕಡೆ ಇದೆ . ಆ ಜಮೀನು ಊರಿನಿಂದ ಮುಕ್ಕಾಲು ಕಿ.ಮೀ. ದೂರದಲ್ಲಿದೆ. ಆ ಜಮೀನಿಗೆ ಹೋಗುವಾಗ ನಮ್ಮ ತಂದೆ ಮತ್ತು 1 ನೇ ಆರೋಪಿ ಕೆಲವೊಮ್ಮೆ ಒಟ್ಟಿಗೆ ಮತ್ತು ಕೆಲವೊಮೆ ಬೇರೆ ಬೇರೆ ಹೋಗುತ್ತಿದ್ದರು ಎಂದರೆ ನಿಜ. ನನ್ನ ತಂದೆ ಮತ್ತು 1 ನೇ ಆರೋಪಿತ ಪರಸ್ಪರ ವ್ಯವಸಾಯದಲ್ಲಿ ಸಹಾಯ ಮಾಡುತ್ತಿದ್ದರು ಎಂದರೆ ನಿಜ. ಅನೇಕ ಬಾರಿ ಇಬ್ಬರೂ ಒಂದೇ ವಾಹನದಲ್ಲಿ ಹೋಗಿ ಅವರವರ ಜಮೀನಿಗೆ ಹೋಗುತ್ತಿದ್ದರು ಎಂದರೆ ನಿಜ. ನಮ್ಮ ಜಮೀನು ಮತ್ತು 1 ನೇ ಆರೋಪಿತನ ಜಮೀನು ಅಕ್ಕ ಪಕ್ಕದಲ್ಲಿವೆ. 1 ನೇ ಆರೋಪಿತ ತಮ್ಮ ಸುದರ್ಶನ ನಮ್ಮ ತಂದೆಯೊಂದಿಗೆ ಚೆನ್ನಾಗಿ ಇದ್ದರೂ ಎಂದರೆ ನಿಜ.

1 ನೇ ಆರೋಪಿ ಮತ್ತು ಅವರ ತಮ್ಮ ನಮ್ಮ ಮನೆಯ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಿದ್ದರು ಎಂದರೆ ಸರಿಯಲ್ಲ. ಪ್ರೀತಿ, ಮಲ್ಲಿಗಮ್ಮ ಮತ್ತು ಮಲ್ಲಿಗಮ್ಮ ಮಗ ಗುರುಸ್ವಾಮಿ ಒಂದೇ ಮನೆಯಲ್ಲಿ ವಾಸವಿದ್ದರೂ ಎಂದರೆ ನಿಜ. ಗುರುಸ್ವಾಮಿ ಮೈಸೂರಿನಲ್ಲಿ ಬಿ.ಕಾಂ ಓದುತಿದ್ದ ಮತ್ತು ಊರಿನಿಂದ ಬಂದು ಹೋಗುತ್ತಿದ್ದ ಎಂದರೆ ನಿಜ. ನನ್ನ ತಂದೆ ಕಾಣೆಯಾದಾಗ ಪ್ರೀತಿ ಮನೆಯಲ್ಲಿ ಇರುತ್ತಿದ್ದಳು. ನಮ್ಮ ತಂದೆ ಕಾಣೆಯಾದಾಗ ಮದುವೆ ಹತ್ತಿರ ಇದ್ದುದರಿಂದ ನಾನು ಊರಿನಲ್ಲೆ ಇದ್ದೆ. ಪ್ರತಾಪನೂ ಸಹ ಊರಿನಲ್ಲಿಯೇ ಇರುತ್ತಿದ್ದ. ನಮ್ಮ ತಂದೆ ಕಾಣೆಯಾಗುವ ಮೊದಲು ಬೇರೆಯವರಿಂದ ತೊಂದರೆ ಇರುವ ಬಗ್ಗೆ ನನಗೆ ಹೇಳಿರಲಿಲ್ಲ. ನನ್ನ ತಂದೆ ಕಾಣೆಯಾದ ಕಾಲಕ್ಕೆ ನಾನು ಪ್ರೀತಿಯವರ ಮನೆಯಲ್ಲಿ ಇದ್ದೆ. ಆ ಕಾಲಕ್ಕೆ ನಾನು ಖಾಯಂ ಆಗಿ ಅಲ್ಲಿಯೇ ಇರುತ್ತಿದ್ದೆ. ಆ ಕಾಲಕ್ಕೆ ಮದುವೆ ಆಗಿರಲಿಲ್ಲ ಎಂದರೆ ನಿಜ. ಆ ಕಾಲಕ್ಕೆ ನಾನು ಅಲ್ಲಿ ಇರುವುದಕ್ಕೆ 2 ನೇ ಆರೋಪಿ ಮಲಿಗಮ್ಮ ತಕರಾರು ಮಾಡಿರಲಿಲ್ಲ. ಆ ಕಾಲಕ್ಕೆ 15 ದಿನಗಳಿಂದ ನಾನು ಅವರ ಮನೆಯಲ್ಲಿ ವಾಸವಾಗಿದ್ದೆ . ಆ ಕಾಲಕ್ಕೆ 2 ನೇ ಆರೋಪಿ ಮಲಿಗಮ್ಮ ಮನೆಯಲ್ಲೇ ಇರುತ್ತಿದ್ದರು. ನಾನು ಅವರ ಮನೆಯಲ್ಲಿ ಇದ್ದಾಗ 1 ನೇ ಆರೋಪಿತರು ಯಾವತ್ತೂ 2 ನೇ ಆರೋಪಿತರ ಮನೆಗೆ ಬಂದಿರಲಿಲ್ಲ. 3 ನೇ ಆರೋಪಿ ಮಧು ಸಹ ಅವರ ಮನೆಗೆ ಬಂದಿರಲಿಲ್ಲ. 2 ನೇ ಮಲಿಗೆಮ್ಮ ಯವರು ವ್ಯವಸಾಯ ಮಾಡುತ್ತಾರ. ಅವರಿಗೆ ಜಮೀನು ಇದೆ. ಸಂಜೆ 07.30 ಕ್ಕೆ ನನ್ನ ತಂದೆ ಕಾಣೆಯಾಗಿದ್ದ ಬಗ್ಗೆ ಗೊತ್ತಾಗಿತ್ತು.

ನನ್ನ ತಂದೆ ದಿನಾಲೂ ಸ್ನೆಹಿತರ ಜೊತೆ ತಿರುಗಾಡುತ್ತಿದ್ದರೂ ಮತ್ತು ಹುಲ್ಲಹಳ್ಳಿ ಮತ್ತು ನಂಜನಗೂಡಿಗೆ ಹೋಗುತ್ತಿದ್ದರು ಎಂದರೆ ನಿಜ . ಚಾಸಾ.2, 4, 5 ಮತ್ತು 8 ರವರು ನನ್ನ ತಂದೆಯ ಸ್ನೇಹಿತರು ಎಂದರೆ ನಿಜ. ಚಾಸಾ.2 ರವರು ಆ ಕಾಲಕ್ಕೆ ಪಂಚಾಯಿತಿ ಸದಸ್ಯರು ಆಗಿದ್ದರು

ಎಂದರೆ ನಿಜ. ನಮ್ಮ ಗ್ರಾಮ ರಾಮಪುರ ಗ್ರಾಮ ಪಂಚಾಯಿತಿಗೆ ಸೇರುತ್ತದೆ. ನಮ್ಮ ತಂದೆ ಚಾಸಾ.2 ರವರ ಜೊತೆ ಪಂಚಾಯಿತಿಗೆ ಹೋಗುವ ಅಭ್ಯಾಸ ಇಟ್ಟುಕೊಂಡಿದ್ದರು ಎಂದರೆ ನಿಜ. ಎಲೆಕ್ಷನ್ ಗೆ ನಿಂತಾಗ ಚಾಸಾ.2 ರವರಿಗೆ ಸಹಾಯ ಮಾಡಿದ್ದರು ಎಂದರೆ ನಿಜ. ನಮ್ಮ ಗ್ರಾಮದ ರಾಜಣ್ಣ ಎಂಬುವರ ಪರಿಚಯ ಇದೆ. ರಾಜಣ್ಣ ಮತ್ತು ನನ್ನ ತಂದೆ ಸ್ನೇಹಿತರು ಎಂದರೆ ಸರಿಯಲ್ಲ. ರಾಜಣ್ಣ ರರಿಗೆ ಜಮೀನು ಮತ್ತು ಪಂಪ್ ಹೌಸ್ ಇದೆ ಎಂದರೆ ನಿಜ. ರಾಜಣ್ಣ ರವರು ಪಂಪ್ ಹೌಸ( ನಲ್ಲಿ ಊರಿನ ಜನರನ್ನು ಕರೆದುಕೊಂಡು ಹೋಗಿ ಇಸ್ಪಿಟ್ ಆಡಿಸುತ್ತಿದ್ದರು ಎಂದರೆ ಗೊತ್ತಿಲ್ಲ. ನನ್ನ ತಂದೆ ಬಿಡುವಾದಾಗ ಇಸ್ಪಿಟ್ ಆಡುತ್ತಿದ್ದರು ಎಂದರೆ ನಿಜ. ನನ್ನ ತಂದೆಗೆ  ಕುಡಿಯುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ.

ನನ್ನ ತಂದೆ ಯಾವ ಸಮಯಕೆ ಯಾರ ಜೊತೆ ಹೋಗುತ್ತಿದ್ದರು ಎಂದು ನನಗೆ ಗೊತ್ತಾಗುತ್ತಿರಲಿಲ್ಲ ಎಂದರೆ ನಿಜ. ಯಾರೋ ಒಬ್ಬರ ಜೊತೆ ಹೋಗುವಾಗ ಮಧ್ಯದಲ್ಲಿ ಗಾಡಿ ಬದಲಾಯಿಸಿ ಬೇರೆಯವರ ಜೊತೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಕಾಣೆಯಾಗುವ 1 ವರ್ಷದ ಮೊದಲು ಮಲಿಗಮ್ಮ ನನ್ನ ಮತ್ತು ಪ್ರೀತಿಯ ಮದುವೆಗೆ ಒಪ್ಪಿರಲಿಲ್ಲ. ನನ್ನ ತಂದೆ ಕಾಣೆಯಾಗುವ ದಿನದಿಂದ  ಒಂದೂವರೆ ವರ್ಷದ ಮೊದಲು ಪ್ರೀತಿ ಮತ್ತು ನನ್ನ ನಡುವೆ ಪ್ರೇಮ ಇದೆ ಎನ್ನುವ ವಿಚಾರ ನಮ್ಮ ಮನೆಯವರಿಗೆ ಗೊತ್ತಾಯಿತು. ಮೊಬೈಲ್ ನಲ್ಲಿನ ಪೋಟೋ ನೋಡಿ ಅವರಿಗೆ ಗೊತ್ತಾಯಿತು. ನಾನು ನನ್ನ ಪ್ರೇಮದ ವಿಚಾರವನ್ನು ನನ್ನ ತಂದಗೆ ಹೇಳಿರಲಿಲ್ಲ. ಶರತ್ ಕುಮಾರವರಿಗೆ ಸಹ ನಾನು ಆ ಬಗ್ಗೆ ಹೇಳಿರಲಿಲ್ಲ. ಪೋನ್ ಸಿಕ್ಕಿ ಹಾಕಿಕೊಂಡ ಬಳಿಕ ಅಂದಾಜು ಒಂದು ವರ್ಷದವರೆಗೆ ನನ್ನ ಮತ್ತು ಪ್ರೀತಿಯ ನಡುವೆ ಸಂಪರ್ಕ ಇರಲಿಲ್ಲ. ಆ ಕಾಲಕ್ಕೆ ನಾನು ಮತ್ತು ಪ್ರೀತಿ ಮಲಿಗಮ್ಮ ನಿಗೆ ನಮ್ಮ ಪ್ರೇಮದ ವಿಚಾರವನ್ನು ತಿಳಿಸಿರಲಿಲ್ಲ.

ಮಲಿಗಮ್ಮ ರವರು ತಮ್ಮ ಮಗಳ ಬಾಳು ಹಾಳಾಗಬಾರದು ಎಂದು ಪೋನ್ ನಲ್ಲಿನ ಪೋಟೋ ನೋಡಿದ ಬಳಿಕ ನನ್ನೊಂದಿಗೆ ತಿರುಗಾಡದಂತೆ ಹೇಳಿದ್ದರು ಎಂದರೆ ನಿಜ. ಒಂದು ವರ್ಷದವರಗೆ ನಾನು ಬೇರೆಯವರಿಗೆ ಮಧ್ಯಸ್ತಿಕೆ ವಹಿಸಲು ನಾನು ಕೇಳಿರಲಿಲ್ಲ.

ನಂತರ ಶರತ್ ಕುಮಾರ್ ರವರ ಅಕ್ಕ ಸುಕನ್ಯ ನನ್ನ ಮತ್ತು ಪ್ರೀತಿಯ ಮದುವೆಯ ಮಾತುಕತೆ ಪ್ರಾರಂಭಿಸಿದರು. ಆ ಸುಕನ್ಯ ಮೈಸೂರಿನಲ್ಲಿ ವಾಸವಿದ್ದಾರೆ. ನಾನೇ ಆ ಸುಕನ್ಯ ರವರನ್ನು ಮಲ್ಲೆಗಮ್ಮ ಜೊತೆ ಮಾತನಾಡಲು ಕೇಳಿಕೊಂಡಿದೆ. ನನ್ನ ತಂದೆ ಕಾಣೆಯಾಗುವ 3-4 ತಿಂಗಳ ಹಿಂದೆ ಆ ರೀತಿ ಕೇಳಿಕೊಂಡಿದ್ದೆ. ಆ ನಂತರ ನನ್ನ ತಂದೆ, ಸುದರ್ಶನ, ಮಹದೇವಪ್ಪ, ಚುಂಚನಹಳ್ಳಿ ಬಸವಣ್ಣ, ಮಲಿಗಮ್ಮ ಮನೆಗೆ ಹೋಗಿ ಮದುವೆ ಮಾತುಕತೆ ಮಾಡಿದ್ದರು. ಆ ಕಾಲಕ್ಕೆ ಅವರೆಲ್ಲರೂ ಮದುವೆ ಗೆ ಒಪ್ಪಿಸಿದ್ದರು ಎಂದರೆ ನಿಜ. ಸಾಲುಂಡಿ ಗೇಟ್ ಕಲ್ಯಾಣ ಮಂಟಪದಲ್ಲಿ ನನ್ನ ಮದುವೆ ಮಾಡಲು ನಿರ್ಧಾರ ಆಗಿತ್ತು. ಸುದರ್ಶನ ಎಂಬುವರು ನನ್ನ ಮದುವೆಯ ಏಪಾರ್ಡು ಮಾಡಲು ಸಹಕರಿಸುತ್ತಿದರು ಎಂದರೆ ನಿಜ. ಆ ಕಾಲಕ್ಕೆ ಕೋವಿಡ್ ರೋಗ ಇದ್ದುದರಿಂದ ನಾನು ಸರಳ ಮದುವೆಗೆಯಾಗಲು ಇಚ್ಚಿಸಿದ್ದೆನು ಎಂದರೆ ನಿಜ. ಮದುವೆ ನಿಶ್ಚಯ ವಾದ ಬಳಿಕ ನಮ್ಮ ಕುಟುಂಬ ಮತ್ತು ಮಲಿಗಮ್ಮ ನ ಕುಟುಂಬದಮಠ ಅನ್ಯೂನತೆಯಿಂದ ಇದ್ದೆವು ಎಂ ದರೆ ನಿಜ. ಸುದರ್ಶನ್ ರವರು ಮೈಸೂರಿನಲ್ಲಿ ನನಗೆ ಮತ್ತು ನನ್ನ ಸಂಬಂಧಿಗಳಿಗೆ ಮದುವೆಗೆ ಬಟ್ಟೆ ಕೊಡಿಸಿದ್ದರು ಎಂದರೆ ನಿಜ. ನನ್ನ ತಂದೆ ಕಾಣೆಯಾಗುವವರೆಗೆ ಮದುವೆಗೆ ಯಾವುದೇ ಅಡ್ಡಿ ಬಂದಿರಲ್ಲ ಎಂದರೆ ನಿಜ.

ನಾನು ಮದುವೆ ನಿಶ್ಚಯ ವಾದ ಬಳಿಕ ಶರತ್ ಕುಮಾರ್ ರವರ ಮನೆಗೂ ಸಹ ಹೋಗುತ್ತಿದ್ದೆ. ಸುದರ್ಶನ್ ಸಹ ಶರತ್ ಕುಮಾರ್ ನ ಹೇಳಿಕೆ ಯಂತೆ ನನ್ನ ಮದುವೆಗೆ ಸಹಕರಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಬಟ್ಟೆ ಖರೀದಿ ಮಾಡಲು ಶರತ್ ಕುಮಾರ್ ನೆ ಸುದರ್ಶನ

ಗೆ ಹಣ ಕೊಟ್ಟಿದ್ದ ಎಂದರೆ ಸರಿಯಲ್ಲ . ನನ್ನ ತಂದೆ ಕಾಣೆಯಾಗಿದ್ದ ದಿನ ಮದ್ಯಾಹ್ನ 04.15 ಕ್ಕೆ ಜಮೀನಿಗೆ ಹೋಗಿ ಬರುವುದಾಗಿ ನನ್ನ ತಮ್ಮನಿಗೆ ಹೇಳಿ ಹೋಗಿದ್ದರು. ಆ ದಿನ ಬೆಳಿಗ್ಗೆ ನಿಂದ ಬೇರೆ ಎಲ್ಲಿಗಾದರೂ ಹೋಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ನನ್ನ ತಂದೆ ಹೋದ ಬಳಿಕ ನನ್ನ ತಮ್ಮ ಎಲ್ಲಿಗೂ ಹೋಗಿರಲಿಲ್ಲ. ದೂರನ್ನು ನಾನು ಹುಲ್ಲಹಳ್ಳಿ ಪೋ.ಠಾಣೆಯ ಹೊರಗಡೆ ಬೇರೇಯವರಿಂದ ಬರೆಸಿದ್ದೆ. ದೂರಿನಲ್ಲಿ ಶರತ್ ಕುಮಾರ್ ಮತ್ತು ಸುದರ್ಶನ್ ಬಗ್ಗೆ ಯಾವ ಕಾರಣಕ್ಕೆ ಅನುಮಾನ ಇದೆ ಎಂದು ಬರೆದಿಲ್ಲ ಎಂದರೆ ನಿಜ.

ಆ ದಿನ ಸಂಜೆ 05.00 ಗಂಟೆಗೆ ನಾನು ಮಲಿಗಮ್ಮನ ಮನೆಯಿಂದ ಸ್ಕೂಲ್ ಮನೆ ಬಳಿ ಹೋಗಿ ನಂತರ ನಮ್ಮ ಮನೆಗೆ ಬದಿದ್ದೆ. ಆ ದಿನ ಬೆಳಿಗ್ಗೆ ಮಲಿಗಮ್ಮ ಎಲ್ಲಿಯೋ ಹೊರಗಡೆ ಹೋಗಿದ್ದರು , ಆದರೆ ಎಲ್ಲಿಗೆ ಎಂದು ನಾನು ಕೇಳಿಲ್ಲ. ದೂರಿನಲ್ಲಿ ಗೌರಮ್ಮ ಮತ್ತು ರತ್ನಮ್ಮ ನ ವಿಚಾರ ಪ್ರಸ್ತಾಪಿಸಿಲ್ಲ ಎಂದರೆ ನಿಜ. ಪ್ರೀತಿ ಮತ್ತು ನನ್ನ ಮದುವೆ ವಿಚಾರ ಊರಿನಲ್ಲಿ ನಮ್ಮ ಚಿಕ್ಕಪ್ಪನ ಮನೆಯವರಿಗೆ ಮತ್ತು ಬೇರೆಯವರಿಗೆ ಪೂರ್ಣವಾಗಿ ಗೂತ್ತಿರಲಿಲ್ಲ ಎಂದರೆ ನಿಜ. ಚಾಸಾ.2 ಗಿರಿಯಯ್ಯನ ಮನೆ ಹಿಂಭಾಗ ಬೀರೆಗೌಡರ ಜಮೀನು ಇದೆ ಎಂದರೆ ನಿಜ. ಗಿರಿಯ್ಯಯನ ಮನೆಯ ಪಕ್ಕದಲ್ಲಿಯೇ ರವೀಶ್ ಎಂಬುವರ ಮನೆ ಇದೆ ಎಂದರೆ , ಅವರ ಮನೆ ಸ್ವಲ್ಪ ದೂರದಲ್ಲಿ ಇದೆ. ಗೌರಮ್ಮನ ಮನೆಯಿಂದ ಗಿರಿಯ್ಯಯನ ಮನೆಗೆ ಹೋಗುವವರೆಗೆ ಮನೆಗಳ ಸಾಲು ಇದೆ ಎಂದರೆ ನಿಜ. ದಿ.28.05.2021 ರಿಂದ 30.05.2021 ರವರೆಗೆ ಬೇರೆ ಬೇರೆ ಕಡೆ ನನ್ನ ತಂದೆಗೋಸ್ಕರ ಹುಡುಕಾಡಿದ್ದೇವು, ಆದರೆ ಸಿಕ್ಕಿರಲಿಲ್ಲ. ದಿ.30.5.2021 ರಿಂದ 02.06.2021 ರ ಮಧ್ಯದಲ್ಲಿ ಪೋಲಿಸರು ಗ್ರಾಮಕ್ಕೆ ಬಂದು ತಪಾಸಣೆ ಮಾಡಿದ್ದರು. ಆಗಲೂ ಸಹ ನನ್ನ ತಂದೆ ಬಗ್ಗೆ ಮಾಹಿತಿ ಸಿಕ್ಕಿರಲಿಲ್ಲ. ನಾನು ಶರತ್ ಕುಮಾರ್ ಮೇಲೆ ಅನುಮಾನ ಇದೆ

ಎಂದಿದ್ದರಿಂದ ದಿ.30.05.2021 ರಂದು ಶರತ್ ಕುಮಾರ್ ನನ್ನು ಪೋ.ಠಾಣೆಗೆ ಕರೆಸಿದ್ದರು ಎಂದರೆ ನಿಜ. ಆ ದಿನದಿಂದ ದಿ.09.06.2021 ರವೆರಗೆ ಶರತ್ ಕುಮಾರ್ ಪೋ.ಠಾಣೆಯಲ್ಲೀ ಇಟ್ಟುಕೊಂಡಿದ್ದರು ಎಂದರೆ ನಿಜ. ಆ ಕಾಲಕ್ಕೆ ನಾನು ನನಗೆ ಸಿಕ್ಕ ಮಾಹಿತಿಯನ್ನು ಪೊಲೀಸರಿಗೆ ಕೊಟ್ಟಿದ್ದೆ. ನನ್ನ ತಂದೆಯ ದೇಹ ದೊರೆತ ಬಳಿಕ ಆ ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೆ.

ನಮ್ಮ ಗ್ರಾಮದಿಂದ ನನ್ನ ತಂದೆಯ ಶವ ದೊರೆತ ಸ್ತಳ 5-6 ಕಿ.ಮೀ. ಇದೆ. ಗೌರಮ್ಮ , ರತ್ನಮ್ಮ ಮತ್ತು ನಮ್ಮ ಕುಟುಂಬದ ನಡುವೆ ಯಾವುದೇ ಸಂಬಂಧ ಇಲ್ಲ ಎಂದರೆ ನಿಜ. ನಮ್ಮ ಮನೆಗೂ ಮತ್ತು ಗೌರಮ್ಮನವರ ಮನೆಗೆ 200 ಮೀ. ಅಂತರ ಇದೆ. ಶರತ್ ಕುಮಾರ್ ಮನೆ ಆ ರಸ್ತೆಯಲ್ಲಿ ಇಲ್ಲ ಎಂದರೆ ನಿಜ. ಶರತ್ ಕುಮಾರ್ ಇವರು ತಮ್ಮ ಹೆಂಡತಿ ಮಕ್ಕಳ ಜೊತೆ ವಾಸವಿದ್ದಾರೆ ಎಂದರೆ ನಿಜ. ನಮ್ಮ ತಂದೆಯವರು ಶವ ದೊರೆತಾಗ ಅವರ ದೇಹದ ಮೇಲೆ ಒಂದು ಚಡ್ಡಿ ಮಾತ್ರ ಇತ್ತು. ಆ ಚಡ್ಡಿಗೂ ಕೆಸರಾಗಿ ಅದನ್ನು ಗುರುತಿಸುವ ಸ್ತಿತಿಯಲ್ಲಿ ಇರಲಿಲ್ಲ ಎಂದರೆ ನಿಜ. ನನ್ನ ತಂದೆಯ ಶವವನ್ನು ಪ್ರಾಣಿಗಳು ತಿಂದಿದ್ದರಿಂದ ಗುರುತು ಹಿಡಿಯುವ ಸ್ತಿತಿಯಲ್ಲಿ ಇರಲಿಲ್ಲ ಎಂದರೆ ನಿಜ. ಶರತ್ ಕುಮಾರ್ ಮತ್ತು ಮಲಿಗಮ್ಮನ ನಡುವೆ ನಡೆದ ಮತುಕತೆಯನ್ನು ನಾನು ಖುದ್ದಾಗಿ ಕೇಳಿಕೊಂಡಿರಲಿಲ್ಲ ಎಂದರೆ ನಿಜ. ಶರತ್ ಕುಮಾರ್ ಮತ್ತು ಮಲಿಗಮ್ಮ ಭೇಟಿಯಾಗಿದ್ದನ್ನು ನಾನು ನೋಡಿಲ್ಲ ಎಂದರೆ ನಿಜ. ಶರತ್ ಕುಮಾರ್ ಅವರು ನನ್ನ ತಂದೆಯನ್ನು ಕರೆದುಕೊಂಡು ಹೋಗಿ ಅವರಿಗೆ ಹೊಡೆದಿದ್ದನ್ನು ನಾನು ನೋಡಿಲ್ಲ ಎಂದರೆ ನಿಜ. 3 ನೇ ಆರೋಪಿ ಶರತ್ ಕುಮಾರ್ ಜಮೀನಿಗೆ ಬಂದದ್ದು ಮತ್ತು ಟ್ರಾಕ್ಟರ್ ತೆಗದುಕೊಂಡು ಹೋಗಿದ್ದನ್ನು ನಾನು ನೋಡಿಲ್ಲ ಎಂದರೆ ನಿಜ.

ನಮ್ಮ ತಂದೆಯ ಶವ ಸಿಕ್ಕಿದ ಬಳಿಕ ಶವ ಪರೀಕ್ಷ್ಮ ವೇಳೆಯಲ್ಲಿ ಪ್ರತಾಪನ ಹೇಳಿಕೆ ಪಡೆದಿದ್ದರು ಎಂದರೆ ನಿಜ. ಶವ ಮಹಜರ್ ಕಾಲಕ್ಕೆ ನಮ್ಮ ತಂದೆಯ ಕೊಲೆಯನ್ನು ಯಾರು ಮಾಡಿದ್ದಾರೆ ಎಂದು ಹೇಳಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ಸಾವಿಗೆ ಜಮೀನಿನ ಬಿನ್ನಾಭಿಪ್ರಾಯ , ಹಣಕಾಸಿನ ಬಿನ್ನಾಭಿಪ್ರಾಯ ಮತ್ತು ಅನೈತಿಕ ಸಂಬಂಧದ ಬಿನ್ನಾಭಿಪ್ರಾಯ ಕಾರಣ ಇರಬಹುದು ಎಂದು ನಾನು ಹೇಳಿಕೆ ಕೊಟಿಟದ್ದೇನೆ ಎಂದರೆ ಸರಿಯಲ್ಲ. ಪೊಲೀಸನವರು ತಮ್ಮ ತನಿಖಾ ಸಮಯದಲ್ಲಿ ಜಮೀನಿನ ಬಿನ್ನಾಭಿಪ್ರಾಯಗಳೇನು, ಹಣಕಾಸಿನ ಬಿನ್ನಾಭಿಪ್ರಾಯಗಳೇನು ಮತ್ತು ಅನೈತಿಕ ಸಂಬಂಧದ ಬಿನ್ನಾಭಿಪ್ರಾಯಗಳೇನು ಎಂದು ಕೇಳಿದ್ದರು ಆಗ ನಾನು ನನ್ನ ಹೇಳಿಕೆ ಕೊಟ್ಟಿದ್ದೆನು. ಚನ್ನಪ್ಪನ ಮಗಳು ಸುಗುಣ ಎಂಬುವರು ನನಗೆ ಗೊತ್ತು. ಅವರಿಗೂ ಸಹ ರಾಮಪುರ ನಾಲೆಯ ಜಮಿನು ಇದೆ ಎಂದರೆ ನಿಜ. ಅವರ ಜಮೀನಿ ನಲ್ಲಿ ನಮ್ಮ ತಂದೆಯವರೆ ವ್ಯವಸಾಯ ಮಾಡುತ್ತಿದ್ದರು ಎಂದರೆ ನಿಜ. ಸುಗುಣ ರವರಿಂದ ಸದರಿ ಜಮೀನು ನನ್ನ ತಂದೆಯ ಹೆಸರಿಗೆ ವರ್ಗಾವಣೆ ಯಾಗಿರಲಿಲ್ಲ ಎಂದರೆನಿಜ. ಅದನ್ನು ನಮ್ಮ ತಂದೆಯವರು ಬಲವಂತವಾಗಿ ದಬ್ಬಾಳಿಕೆಯಿಂದ ಸಾಗುವಳಿ ಮಾಡುತ್ತಿದ್ದರು ಎಂದರ ಸರಿಯಲ. ಈ ವಿಚಾರವಾಗಿ ಸುಗುಣ ರವರ ಕುಟುಬಂದವರಿಗೂ ನನ್ನ ತಂದೆ ಗೂ ಹಲವು ಬಾರಿ ಗಲಾಟೆಗಳು ಆಗಿವೆ ಎಂದರೆ ಸರಿಯಲ್ಲ.

ಶಿವಪ್ಪ ನ ಮಗ ಮಂಜು ಎಂಬುವವರು ನನಗೆ ಗೂತ್ತು. ಇವರ ಜಮೀನು ನಮ್ಮ ಜಮೀನಿನ ಪಕ್ಕ ಇದೆ ಎಂದರೆ ನಿಜ. ಸದರಿ ಜಮೀನಿನಲ್ಲಿ ನಾವು 15 ಕುಂಟೆ ಜಮೀನು ಒತ್ತುವರಿ ಮಾಡಿದ್ದೇವು ಎಂದರೆ ಸರಿಯಲ್ಲ. ಆ ಕುರಿತು ಸಹ ನಮ್ಮ ತಂದೆ ಮತ್ತು ನಾನು ಮಂಜುವರ ಜೊತೆ ಗಲಾಟೆ ಮಾಡಿದ್ದೇವು ಎಂದರೆ ಸರಿಯಲ್ಲ. ಪುಟ್ಟಪ್ಪನ ಮಗ ಮೂರ್ತಿ ಎಂಬುವರು ನನಗೆ ಗೊತ್ತು.

ಮೂರ್ತಿ ಮತ್ತು ನನ್ನ ತಂದೆ ನಡುವೆ ಜಮೀನಿನ ವ್ಯಾಜ್ಯ ಇತ್ತು ಎಂದರೆ , ಆ ಕಾಲಕ್ಕೆ ಇರಲ್ಲಿ ಈಗ ಇದೆ. ಮೂರ್ತಿ ಯವರ ಜಮೀನಿ ನಲ್ಲಿ ಯೂ ಸಹ ನಮ್ಮ ತಂದೆಯವರು ಅಕ್ರಮ ವಾಗಿ ಸಾಗುವಾಳಿ ಮಾಡುತ್ತಿದ್ದಾರೆ ಎಂದು ಅವರ ಹೇಳುತ್ತಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ಕಾರಣಗಳಿಂದ ನನ್ನ ತಂದೆ ಗೆ ಆಗದವರು ಬಹಳ ಜನ ಇದ್ದರೂ ಎಂದರೆ ಸರಿಯಲ್ಲ. ಶರತ್ ಕುಮಾರ್ ರವರು ಕುಟುಂಬವನ್ನು ಕಂಡರೆ ನನ್ನ ತಂದೆ ಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದರೆ ಮಾತುಕತೆ ಇರಲಿಲ್ಲ. ಹಾಗಾಗಿ ನನ್ನ ತಂದೆ ಕಾಣೆಯಾಗುವುದಕ್ಕೆ ಆ ಶರತ್ ಕುಮಾರ್ ರವರು ಕಾರಣ ಎಂದು ಸುಳ್ಳು ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಅವರ ತಮ್ಮ ಸುರೇಶ್‌ನ ಜೊತೆ ವಾಸವಿದ್ದರು. ಮನೆಯ ವಿಚಾರದಲಿಲ ನನ್ನ ತಂದೆಗೂ ಅವರ ತಮ್ಮ ಸುರೇಶನಿಗೂ ಬಿನ್ನಾಬಿಪ್ರಾಯ ಇತ್ತು ಎಂದರೆ ಸರಿಯಲ್ಲ.

ನವೆಂಬರ್ 2021 ರಲ್ಲಿ ನನ್ನ ಮತ್ತು ಪ್ರೀತಿಯ ಮದುವೆ ಆಯಿತು. ಆ ಕಾಲಕ್ಕೆ ಮಲಿಗಮ್ಮ ಯಾವುದೇ ತಕರಾರು ಮಾಡಿಲ್ಲ. ಇತ್ತಿಚೇಗೆ 1 ತಿಂಗಳ ಹಿಂದೆ ಪ್ರೀತಿ ಯವರು ಸುರೇಶನ ಮೇಲೆ ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯೂ ಸ್ವತಃ ಹೇಳುತ್ತಾರೆ ನನ್ನ ಮೇಲೆ ದೂರು ಕೊಟ್ಟಿದ್ದಾರೆ. ಆ ಕಾಲಕ್ಕೆ ನನ್ನ ಚಿಕ್ಕಪ್ಪನೂ ಸಹ ಪೊಲೀಲಸರವರು ಕರೆಸಿದ್ದರು ಎಂದರೆ ನಿಜ. ಶರತ್ ಕುಮಾರ್ ರವರನ್ನು ವಿಚಾರಣೆ ಮಾಡುವಾಗ ನನ್ನನ್ನು ಅಲ್ಲಿಗೆ ಕರೆಸಿರಲಿಲ್ಲ ಎಂದರೆ ನಿಜ. ಆ ಕಾಲಕ್ಕೆ ಪೊಲೀಸನವರ ಮುಂದೆ ಶರತ್ ಕುಮಾರ್ ರವರು ಏನು ಹೇಳಿಕೆ ಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ ಎಂದರೆ, ನಂತರದಲ್ಲಿ ನನಗೆ ಪೊಲೀಸರಿಂದ ಗೊತ್ತಾಗಿದೆ. ಶವ ಬಿಸಾಡಿದ ಸ್ತಳದಲ್ಲಿ ಮತ್ತು ಪಂಚೆ , ಕುಡುಗೋಲು ಮತ್ತು ಹ್ಯಾಂಗ್ಲಲರ್ ಗಳನ್ನು ವಶಕ್ಕೆ ಪಡೆದ ಸ್ತಳದಲ್ಲಿ ನನ್ನ ಸಹಿ ಪಡೆದಿದ್ದಾರೆ. ಆ ಸಮಯಕ್ಕೆ ಆ ಸ್ತಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನೋಡಿದಾಗ ಪಂಚೆಗೆ ಕೆಸರಾಗಿತ್ತು

ಮತ್ತು ಅದು ಗುರುತಿಸಲು ಆಗದ ಸ್ಥಿತಿಯಲ್ಲಿ ಇತ್ತು. ರಾಮಪುರ ಗ್ರಾಮ ನಾಲೆಯ ಪಕ್ಕದಲ್ಲಿ ಇದೆ. ಅಲ್ಲಿ ಬಟ್ಟೆಯನ್ನು ತೊಳೆಯುತ್ತಾರೆ ಮತ್ತು ನಾಲೆ ಪಕ್ಕ ವ್ಯವಸಾಯದ ಜಮೀನು ಇದೆ ಎನ್ನುವುದು ನಿಜ. ರಾಮಪುರ ನಾಲೆ ಯಲ್ಲಿ ಬೇಡವಾದ ವಸ್ತುಗಳನ್ನು ಬಿಸಾಡುತ್ತಾರೆ ಎಂದರೆ ಸರಿಯಲ್ಲ. ಎಂಒ–1 ರಿಂದ 4 ಕ್ಕೂ ನಮ್ಮ ತಂದೆಗೊ ಯವೂದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಶರತ್ ಕುಮಾರ್ ರವರು ನಮಂ ತಂದೆಯ ಸಾವಿಗೆ ಕಾರಣಕರ್ತರೂ ಎಂದು ಸುಳ್ಳು ಸಾಕ್ಷಿ ಹೇಳುತ್ತಿದೇಃನೆ ಎಂದರೆ ಸರಿಯಲ್ಲ.

ನಮ್ಮ ತಂದೆ ಕಾಡನಹಳ್ಳಿ ಕುಯಿಟುಮಲ್ಲೇಗೌಡನ ಬಸವೇಗೌಡನ ಬಳಿ 1,00,000/– ರೂ. ಸಾಲವಾಗಿ ಪಡೆದಿದ್ದರೂ ಮತ್ತು ಅದನ್ನು ವಾಪಾಸ್ ಕೊಟ್ಟಿರಲಿಲ್ಲ ಎಂದರೆ ನಿಜ. ಈ ವಿಚಾರವಾಗಿ ಸಹ ನನ್ನ ತಂದೆಯೊಂದಿಗೆ ಗಲಾಟೆ ಮಾಡಿದ್ದರು ಎಂದರೆ ಸರಿಯಲ್ಲ. ಶರತ್ ಕುಮಾರ್ ರವರು ಪ್ರೀತಿಯ ಮದುವೆಗೆ ಅಡ್ಡಿ ಮಾಡುತ್ತಿದ್ದರು ಹಾಗೂ ಶರತ್ ಕುಮಾರ್ ರವರು ಮತ್ತು ಮಲಿಗಮ್ಮನ ನಡುವೆ ಒಳ ಒಪ್ಪಂದ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇಃನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು *2* ಮತ್ತು *3* ನೇ ಆರೋಪಿತರ ಪರ ವಕೀಲರು *1* ನೇ ಆರೋಪಿತರ ವಿಚಾರಣೆಯನ್ನು ಅಳವಡಿಸಿಕೊಳ್ಳುತ್ತಾರೆಂದು ಹೇಳಿರುತ್ತಾರೆ</u>**

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು